*ಶ್ರೀಮತಿ ಸುನಂದ, ಗೌರಿಬಿದನೂರು*

*ಬೈಬಲ್, ಕುರಾನ್, ರಾಮಾಯಣ, ಮಹಾಭಾರತಗಳಂತಹ ಮಹಾನ್ ಗ್ರಂಥಗಳನ್ನು ಹೆಂಗಸರು ಯಾರೂ ರಚಿಸಿಲ್ಲವೇ?*



ಅವರು ಅದಕ್ಕಿಂತಲೂ ಗ್ರೇಟ್; ಅಂತಹ ಕೃತಿಗಳಿಗೆ ಜನ್ಮ ನೀಡಿದವರಿಗೆ ಜನ್ಮ ನೀಡಿದರು!

*ಬಿ.ಎಂ. ಪರಶಿವಮೂರ್ತಿ, ಬೆಂಗಳೂರು*

*ಇತ್ತೀಚೆಗೆ ನನ್ನ ಕನಸಿನಲ್ಲಿ ಹುಡುಗಿಯರ ಬದಲು ರಾಜಕಾರಣಿಗಳು ಕಾಣಿಸುತ್ತಿದ್ದಾರೆ; ಇದು ಯಾವುದರ ಸೂಚನೆ?*

ರಾಜಕಾರಣಿಗಳೇ? ಹಾಗಿದ್ದರೆ ಅದು ಕನಸಲ್ಲ; ದುಃಸ್ವಪ್ನ! ಕೂಡಲೆ ಮನೋವೈದ್ಯರನ್ನು ಸಂಪರ್ಕಿಸಿ.

*ಕುಮಾರ ಚಲವಾದಿ, ಹೊಳೆನರಸಿಪುರ*

*ಮಾಟ, ಮಂತ್ರಗಳಿಂದ ಎಲ್ಲವನ್ನೂ ಈಡೇರಿಸಿಕೊಳ್ಳಬಹುದೇ?*

ಹಾಗೇನಾದರೂ ಆಗುವಂತಿದ್ದರೆ ಎಲ್ಲಾ ದೇಶಗಳಿಗೂ ವಾಮಾಚಾರಿಯೇ ಪ್ರಧಾನಿಯಾಗುತ್ತಿದ್ದ!

*ಜೆ. ಪ್ರದೀಪಕುಮಾರ, ಹೂವಿನಹಡಗಲಿ*

*ಇಂದಿನ ಎಸ್.ಎಂ.ಎಸ್.ಗಳಿಗೂ, ಹಿಂದಿನ ಮೇಘಸಂದೇಶಗಳಿಗೂ ಏನು ವ್ಯತ್ಯಾಸ?*




ಅದು ಕಾವ್ಯದ ಹರಿವು; ಇದು ವಾಕ್ಯದ ಹರಕು.

*ಕೆ.ಎಸ್. ನಾರಾಯಣರೆಡ್ಡಿ, ಕೆ.ಜಿ.ಎಫ್*

*ಗಾಂಧೀಜಿ ತಮ್ಮ ಆತ್ಮಚರಿತ್ರೆಗೆ ಸತ್ಯಾನ್ವೇಷಣೆ ಶೀರ್ಷಿಕೆ ಕೊಟ್ಟಹಾಗೆ ಇಂದಿನ ರಾಜಕಾರಣಿಗಳ ಆತ್ಮಕಥನಕ್ಕೆ ಯಾವ ಶೀರ್ಷಿಕೆ ಕೊಡಬಹುದು?*

ವಿತ್ತಾನ್ವೇಷಣೆ!

*ಕೆ. ಮೈಥಿಲಿಕೃಷ್ಣ, ಬೆಂಗಳೂರು*

*ವಿಧಾನಸಭೆಗೆ ಮತ್ತು ಲೋಕಸಭೆಗೆ ಸ್ಪರ್ಧಿಸಲು ಕನಿಷ್ಠ ಅರ್ಹತೆ ಏನು?*

ಎಲ್ಲಾ ಗುಣಗಳಲ್ಲೂ ಕನಿಷ್ಠನಾಗಿದ್ದರೆ ಸಾಕು!

*ಎಂ.ಎಸ್. ಸೋಮಶೇಖರ್, ಮೈಸೂರು*

*ಜಗದಲ್ಲಿ ಮಾನವನ ಹೊರತಾಗಿ ಬೇರೆ ಯಾವ ಪ್ರಾಣಿ, ಪಕ್ಷಿ, ಕ್ರಿಮಿ, ಕೀಟಗಳೂ ಇಲ್ಲದಿದ್ದರೆ ಹೇಗಿರುತ್ತಿತ್ತು?*

ಬಾಡೂಟದ ಗಮ್ಮತ್ತೇ ಇಲ್ಲವಾಗುತ್ತಿತ್ತು!

*ವಿ. ಹಮೀದ್, ವಿಟ್ಲ*

*ತುಂಬಾ ಸುಂದರವಾಗಿರುವವರಿಗೆ ಬುದ್ಧಿ ಕಡಿಮೆಯಂತೆ, ಹೌದಾ?*

ಕನ್ನಡಿಯ ಹೊರತಾಗಿ ಬೇರೇನನ್ನೂ ನೋಡದ್ದರಿಂದ ಹೀಗಾಗುವುದಂತೆ!

*ಕೇಶವ ಎನ್. ಪೈ, ಹೊನ್ನಾವರ*

*ಡಿವೈನ್ ಸೆಂಟರ್‌ನ ತೀರ್ಥಕ್ಕೂ, ವೈನ್ ಸೆಂಟರ್‌ನ ತೀರ್ಥಕ್ಕೂ ಏನು ಅಂತರ?*

ಮೊದಲ ತೀರ್ಥದ ಸೇವನೆಗೆ ಚಾಮರದ ಸೇವೆ; ಎರಡನೆಯದಕ್ಕೆ ಗೃಹಚಾಮರದ ಸೇವೆ!

*ಕಂಡಕ್ಟರ್ ರಾಜು, ಗುಬ್ಬಿ*

*ಶೃಂಗಾರ ಕವಿಗೂ, ಬಂಡಾಯ ಸಾಹಿತಿಗೂ ಇರುವ ವ್ಯತ್ಯಾಸವೇನು?*

ಅದೇ ಶಿಲೆ, ಅದೇ ಕಲೆ; ಕವಿಯ ಕಣ್ಣಿಗೆ ಹೂರಣ, ಬಂಡಾಯಗಾರನಿಗೆ ರಣ!

*ಬಿ.ಎಸ್. ಮಳ್ಳೂರು, ಹಲಗತ್ತಿ*

*ಕಟ್ಟಿಕೊಂಡವಳು ಕಡೆ ತನಕ, ಇಟ್ಟುಕೊಂಡವಳು ಇರುವ ತನಕ; ಮೂರನೆಯ ಗಾದೆ ಏನು?*

ಕೋರ್ಟು ಕಂಡವಳ ಬಳಿ ಕನಕ.

*ಪ್ರಸನ್ನ ದಿ. ಹೆಗಡೆ, ಸಾಗರ*

*ತಾವು ಹೇಳಿದಂತೆ ಮಕ್ಕಳು ಕೇಳಬೇಕೆನ್ನುವ ಅಪ್ಪ ಅಮ್ಮ ಮಕ್ಕಳು ಹೇಳಿದ್ದನ್ನು ಏಕೆ ಕೇಳುವುದಿಲ್ಲ?*

ಅವರ ಅಪ್ಪ ಅಮ್ಮ ಹೇಳಿದಾಗ ಅವರು ಕೇಳದೇ ಕೆಟ್ಟಿದ್ದಕ್ಕೆ ಪಶ್ಚಾತ್ತಾಪ ಪಡುವ ರೀತಿಯದು; ಪಾಪ!

*ಶಿರಾಲಿ ದೀಪಕ್ ಆರ್ ಶೇಟ್, ತ್ಯಾಗರಾಜನಗರ*

*ರಾಜಕೀಯಕ್ಕೂ, ಮದುವೆಗೂ ಏನಾದರೂ ವ್ಯತ್ಯಾಸ ಇದೆಯಾ?*

ರಾಜಕೀಯ ವಿಚ್ಛೇದನಕ್ಕೆ ಲಾಯರ್‌ನ ಅಗತ್ಯವಿಲ್ಲ.

*ಲಕ್ಷ್ಮಿ ಎಸ್. ಮೆಳ್ಳಗೇರಿ, ಗಿರಗಾಂವ*

*ಹೆಂಡತಿಯ ಮೇಲಿನ ಪ್ರೀತಿಗಿಂತ ಪ್ರೇಯಸಿಯ ಮೇಲಿನ ಪ್ರೀತಿ ಜಾಸ್ತಿ ಇರುತ್ತದೆ; ಏಕೆ?*

ಲೀನಿಂಗ್ ಟವರ್‌ನ ಆಕರ್ಷಣೆ ವೈಟ್ ಹೌಸಿಗಿಲ್ಲ; ಅಭದ್ರತೆ ಇದ್ದಷ್ಟೂ ಆಕರ್ಷಣೆ, ಪ್ರೀತಿ ಹೆಚ್ಚು.

## ಬಹುಮಾನಿತ ಪ್ರಶ್ನೆ

*ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ*

*ಹಿಂದೆ ಜಾರಿಯಲ್ಲಿದ್ದ ಸತಿ ಸಹಗಮನ ಪದ್ಧತಿ ಈಗ ಮತ್ತೆ ಶುರುವಾದರೆ ಏನಾದೀತು?*

ಗಂಡ ನರ್ಸಿಂಗ್ ಹೋಂ ಸೇರುತ್ತಿದ್ದಂತೆಯೇ ಹೆಂಡತಿ ಡೈವೋರ್ಸ್ ಪಡೆಯುವಂತಾದೀತು!

*ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ*

*ನಿಮಗೇಕೆ ಇನ್ನೂ ರಾಜ್ಯೋತ್ಸವ ಪುರಸ್ಕಾರ ದೊರೆತಿಲ್ಲ?*

ಓದುಗರ ಪ್ರತಿ ಪ್ರಶಂಸೆಯೂ ನೂರು ಪುರಸ್ಕಾರಗಳಿಗೆ ಸಮವಾಗಿರುವಾಗ ಆ ಚಿಲ್ಲರೆ ಪ್ರಶಸ್ತಿಗಳೆಲ್ಲಾ ಏಕೆ ಬಿಡಿ.

*ಎಂ.ಎಸ್. ಧರ್ಮೇಂದ್ರ, ಜಿ.ಟಿ.ಆರ್.ಇ. ಕ್ಯಾಂಪಸ್*

*ಬ್ರಾಂದಿಗೂ, ಭ್ರಾಂತಿಗೂ ಏನು ವ್ಯತ್ಯಾಸ?*

ಕೆಲವೇ ಪೆಗ್‌ಗಳು.

*ಎ.ಎಸ್. ಸ್ವಾಮಿ, ಸುರಪುರ*

*ಬಾರ್‌ಗಳಿಗೆ ದೇವರುಗಳ ಹೆಸರನ್ನಿಟ್ಟಿರುವುದೇಕೆ?*



ಅಲ್ಲಿಯೂ ತೀರ್ಥ ಸಿಗುವುದರಿಂದ ಎಂದನೊಬ್ಬ ಕಿಡಿಗೇಡಿ.

*ನೆ.ಸು. ಆನಂದ್, ಕತ್ತರಿಗುಪ್ಪೆ*

*ನಿಧಾನವೇ ವಿಧಾನವೆಂದು ವಾದಿಸಿದ ನೌಕರನೊಬ್ಬನಿಗೆ ಮುಂಬಡ್ತಿಯೋ, ಹಿಂಬಡ್ತಿಯೋ?*

ಸರ್ಕಾರಿ ನೌಕರನಾದರೆ ಮುಂಬಡ್ತಿ, ಖಾಸಗಿ ನೌಕರನಾದರೆ ಎತ್ತಂಗಡಿ.

*ಮೊಳಕಾಲ್ಮೂರು ಸುರೇಶ್, ಬಳ್ಳಾರಿ*

*ನಿರಾಭರಣಸುಂದರಿ ಎಂದು ಹೆಂಡತಿಯನ್ನು ಹೊಗಳಿದರೆ ಆಗುವ ಪರಿಣಾಮ ಏನಣ್ಣ?*

ಒಡವೆ ತರಕ್ಕೆ ಯೋಗ್ಯತೆ ಇಲ್ದಿದ್ರೂ ಗಿಲೀಟ್ ಮಾತ್ಗೇನೂ ಕಡಿಮೆ ಇಲ್ಲ ಎಂಬ ಬೈಗುಳ ಉಚಿತವಾಗಿ ದೊರೆಯುತ್ತದೆ.

■ ರಾಮ್